# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 859 |
| ವಿಧಾನ ಪರಿಷತ್ತು ಸದಸ್ಯರ ಹೆಸರು | : | ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 09.03.2021 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಸರ್ಕಾರದಿಂದ ಬಡವರಿಗೆ ವಿತರಿಸಲಾಗಿರುವ ಉಜ್ವಲ ಯೋಜನೆಗೆ ಅರ್ಹ ಫಲಾನುಭವಿಗಳನ್ನು ಗುರುತಿಸಲು ಇರುವ ಮಾನದಂಡಗಳೇನು; | ಪ್ರಧಾನಮಂತ್ರಿ ಉಜ್ವಲ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿರುತ್ತದೆ. ಸದರಿ ಯೋಜನೆಗೆ ಅರ್ಹ ಫಲಾನುಭವಿಗಳನ್ನು ಗುರುತಿಸಲು ಕೇಂದ್ರ ಸರ್ಕಾರವು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸುತ್ತಿದೆ:<br>1. 2011 ರ Socio Economic Caste Survey (SECC) ಪಟ್ಟಿಯಲ್ಲಿರುವ ಫಲಾನುಭವಿಗಳು.<br>2. ಪಿಎಂಎವೈ (ಗ್ರಾಮೀಣ)ಯೋಜನೆಯಡಿ ಬರುವ ಎಲ್ಲಾ ಎಸ್‌ಟಿ/ಎಸ್‌ಸಿ ಕುಟುಂಬಗಳ ಫಲಾನುಭವಿಗಳು.<br>3. ಅಂತ್ಯೋದಯ ಅನ್ನ ಯೋಜನೆ (ಎಎವೈ) ಕುಟುಂಬಗಳು<br>4. ಅರಣ್ಯವಾಸಿಗಳು.<br>5. ತೀವ್ರ ಹಿಂದುಳಿದ ವರ್ಗದವರು.<br>6. ಚಹ ತೋಟಗಳಲ್ಲಿ ಕೆಲಸ ಮಾಡುತ್ತಿರುವ ಮತ್ತು ಮಾಡುತ್ತಿದ್ದ ಬುಡಕಟ್ಟು ಜನಾಂಗದವರು<br>7. ನದಿ ದಡಗಳಲ್ಲಿ ಮತ್ತು ದ್ವೀಪಗಳ ನಿವಾಸಿಗಳು.<br>ಈ ಯೋಜನೆಯ ಲಾಭಾಂಶಗಳನ್ನು ಈಶಾನ್ಯ (ಎನ್‌ಇ) ರಾಜ್ಯಗಳು ಸೇರಿದಂತೆ ಗುಡ್ಡಗಾಡು ರಾಜ್ಯಗಳಲ್ಲಿ ವಾಸಿಸುವ ಜನರಿಗೆ "ಆದ್ಯತೆಯ ರಾಜ್ಯಗಳು" ಎಂದು ಪರಿಗಣಿಸುವ ಮೂಲಕ ವಿಸ್ತರಿಸಲಾಗಿದೆ.<br>ಪ್ರಧಾನ ಮಂತ್ರಿ ಉಜ್ವಲ ಯೋಜನೆಯ ಅರ್ಹತಾ ಮಾನದಂಡಗಳು:<br>1. ಅರ್ಜಿದಾರರು 18 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯಾಗಿರಬೇಕು. |

| | | |
|---|---|---|
| | | 2. ಅರ್ಜಿದಾರರು ಬಿ.ಪಿ.ಎಲ್ ಕಾರ್ಡು ಹೊಂದಿರಬೇಕು ಮತ್ತು ಗ್ರಾಮೀಣ ನಿವಾಸಿಯಾಗಿರಬೇಕು.<br>3. ಸಹಾಯಧನ ಮೊತ್ತವನ್ನು ಪಡೆಯಲು ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ಹೊಂದಿರಬೇಕು.<br>4. ಅರ್ಜಿದಾರರ ಮನೆಯವರು ಈಗಾಗಲೇ ಯಾವುದೇ ಅನಿಲ ಸಂಪರ್ಕವನ್ನು ಹೊಂದಿರಬಾರದು. |
| ಆ | ಈ ಯೋಜನೆಗೆ ಒಳಪಟ್ಟ ಫಲಾನುಭವಿಗಳ ಸಂಖ್ಯೆ ಎಷ್ಟು; ಹಾಗೂ ಬೆಳಗಾವಿ ಜಿಲ್ಲೆಯಲ್ಲಿ ಇರುವ ಉಜ್ವಲ ಫಲಾನುಭವಿಗಳ ಸಂಖ್ಯೆ ಎಷ್ಟು; | ಕೇಂದ್ರ ಸರ್ಕಾರದ ತೈಲ ನಿಗಮಗಳಿಂದ ಕರ್ನಾಟಕ ರಾಜ್ಯದಲ್ಲಿ 31.5 ಲಕ್ಷ ಫಲಾನುಭವಿಗಳಿಗೆ ಅನಿಲ ಸಂಪರ್ಕಗಳನ್ನು ಒದಗಿಸಲಾಗಿದೆ. ಬೆಳಗಾವಿ ಜಿಲ್ಲೆಯಲ್ಲಿರುವ ಉಜ್ವಲ ಯೋಜನೆಯ ಫಲಾನುಭವಿಗಳ ಸಂಖ್ಯೆ 252581. |
| ಇ | ಉಜ್ವಲ ಯೋಜನೆಯಿಂದ ಸರ್ಕಾರಕ್ಕೆ ಆಗಿರುವ ವಾರ್ಷಿಕ ಹೊರೆ ಎಷ್ಟು? | ಸದರಿ ಯೋಜನೆಯ ಕೇಂದ್ರ ಸರ್ಕಾರದ ಯೋಜನೆಯಾಗಿದ್ದು ರಾಜ್ಯ ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲ. ಉಜ್ವಲ ಯೋಜನೆಯಡಿ ಕೇಂದ್ರ ಸರ್ಕಾರವು ಒಬ್ಬ ಫಲಾನುಭವಿಗೆ ಅನಿಲ ಸಂಪರ್ಕವನ್ನೊದಗಿಸಲು 1600/-ಗಳನ್ನು ವೆಚ್ಚ ಮಾಡುತ್ತದೆ. ಸದರಿ ಯೋಜನೆಯ ಪ್ರಾರಂಭವಾದಾಗಿನಿಂದ ಅರ್ಹ ಉಜ್ವಲ ಫಲಾನುಭವಿಗಳಿಗೆ ಕೇಂದ್ರ ಸರ್ಕಾರದಿಂದ ವರ್ಗಾಯಿಸಲಾದ ಒಟ್ಟು ಸಬ್ಸಿಡಿ ಮೊತ್ತ ರೂ.227.56 ಕೋಟಿಗಳಾಗಿದೆ. |

ಆನಾಸ 81 ಡಿಆರ್‌ಎ 2021 (ಇ-ಆಫೀಸ್)

(ಉಮೇಶ ವಿ. ಕತ್ತಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು